ದಿನಾಂಕ 25-03-2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರ ಶ್ರೀ ಎಸ್.ಎನ್., ವಕೀಲರಿಂದಃ-

ನಾನು ಎಸ್.ಎಸ್.ಎಲ್.ಸಿ.,ವರೆಗೆ ಕಲಿತಿದ್ದೇನೆ. ವಾದಿಗಳು ನನ್ನ ಸೋದರತ್ತೆಯಂದಿರು. ವಾದಿಗಳು ಈ ದಾವೆಯನ್ನು ಜಮೀನಿನಲ್ಲಿ ಭಾಗ ಬೇಕೆಂದು ಸಲ್ಲಿಸಿದ್ದಾರೆ. ನನ್ನ ತಾತನ ಹೆಸರು ಈರನಾಗಿ ನರಸಿಂಹಯ್ಯ ಎಂದರೆ ಸರಿ. ನನ್ನ ಅಜ್ಜಿಯ ಹೆಸರು ನರಸಮ್ಮ ಎಂದರೆ ಸರಿ. ಅವರಿಗೆ ನಲ್ಲನಾಗಯ್ಯ ಮತ್ತು ನರಸಿಂಹಯ್ಯ ಅಲಿಯಾಸ್ ಕರಿಯಪ್ಪ ಎಂಬ ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ನಲ್ಲನಾಗಯ್ಯನ ಪತ್ನಿಯ ಹೆಸರು ನರಸಮ್ಮ ಎಂದರೆ ಸರಿ. ಅವರಿಗೆ ನರಸಿಂಹಯ್ಯ, ನರಸಪ್ಪ, ಬೀರಪ್ಪ ಮತ್ತು ಕೆಂಚಪ್ಪ ಎಂಬ ನಾಲ್ಕು ಜನ ಮಕ್ಕಳು ಎಂದರೆ ಸರಿ. ನರಸಿಂಹಯ್ಯ ಅಲಿಯಾಸ್ ಕರಿಯಪ್ಪನವರ ಪತ್ನಿಯ ಹೆಸರು ನರಸಮ್ಮ ಎಂದರೆ ಸರಿ. ಅವರಿಗೆ 1ನೇ ವಾದಿ ಗಂಗನರಸಮ್ಮ, 2ನೇ ವಾದಿ ಚಿನ್ನಮ್ಮ ಮತ್ತು ನರಸಿಂಹಯ್ಯ ಎಂಬ ಮಕ್ಕಳು ಎಂದರೆ ಸರಿ. ನನ್ನ ತಾಯಿಯ ಹೆಸರು ಬೊಮ್ಮಕ್ಕ ಎಂದರೆ ಸರಿ. ನಿಮ್ಮ ತಂದೆ, ತಾಯಿಗೆ ಶಾರದಮ್ಮ, ಭಾಗ್ಯಮ್ಮ, ಕೃಷ್ಣಪ್ಪ ಎಂಬ ಮಕ್ಕಳು ಎಂದರೆ ಸಾಕ್ಷಿಯು ನಾಲ್ಕು ಜನ ಇದ್ದರು ಅವರಲ್ಲಿ ಉಮೇಶ್ ಎಂಬ ಮಗ ತೀರಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಉಮೇಶ್ ವಿವಾಹವಾಗದೇ ತೀರಿಕೊಂಡರು ಎಂದರೆ ಸರಿ.

2. ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ಸರ್ವೇ ನಂ.99 ಮಾತ್ರ ಪಿತ್ರಾರ್ಜಿತ ಆಸ್ತಿ, ಉಳಿದ ಎರಡು ಸ್ವತ್ತುಗಳು ನನ್ನ ತಾತನ ಮರಣಾ ನಂತರ ನನ್ನ ತಂದೆ ಖರೀದಿ ಮಾಡಿರುವ ಸ್ವತ್ತುಗಳು ಎಂದು ನುಡಿಯುತ್ತಾರೆ. ಕ್ರಯಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ಮತ್ತು 3 ನಿಮ್ಮ ತಂದೆ ಖರೀದಿ ಮಾಡಿರುವ ಸ್ವತ್ತುಗಳು ಎಂದು ಲಿಖಿತ

ಹೇಳಿಕೆಯಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿಯು ನಮ್ಮನ್ನು ಯಾರೂ ಕೇಳಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ಮತ್ತು 3 ಪಿತ್ರಾರ್ಜಿತ ಆಸ್ತಿಗಳಾಗಿದ್ದು, ನನ್ನ ತಂದೆ ವಾದಿಗಳಿಗೆ ಗೊತ್ತಿಲ್ಲದ ಹಾಗೆ ಮೋಸದಿಂದ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಕಾಲಕ್ಕೆ ದಾವಾ ಸ್ವತ್ತುಗಳ ಸಂಬಂಧ ಯಾವುದೇ ಭಾಗ ಆಗಿಲ್ಲ ಎಂದರೆ ಸಾಕ್ಷಿಯು ಆಗಿತ್ತು ಎಂದು ನುಡಿಯುತ್ತಾರೆ. ಭಾಗ ಆಗಿದೆ ಎಂದು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಒಪ್ಪಿಗೆ ಪತ್ರ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ.

3. ಸರ್ವೆ ನಂ.99ರ ಒಟ್ಟು ವಿಸ್ತೀರ್ಣ 6 ಎಕರೆ 39 ಗುಂಟೆ ಎಂದರೆ ಸರಿ. ಸದರಿ ಸ್ವತ್ತಿನಲ್ಲಿ ನಲ್ಲನಾಗಯ್ಯನಿಗೆ ಮೂರು ಎಕರೆ ಹತ್ತೊಂಭತ್ತುವರೆ ಗುಂಟೆ, ನನ್ನ ತಂದೆಗೆ ಮೂರು ಎಕರೆ ಹತ್ತೊಂಭತ್ತುವರೆ ಗುಂಟೆ ಭಾಗದಲ್ಲಿ ಬಂದಿದೆ ಎಂದರೆ ಸರಿ. ಸದರಿ ಮೂರು ಎಕರೆ ಹತ್ತೊಂಭತ್ತುವರೆ ಗುಂಟೆ ಸ್ವತ್ತಿನಲ್ಲಿ ನಲ್ಲನಾಗಯ್ಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ದಾವಾ ಐಟಂ ನಂ.1ರಲ್ಲಿ ವಾದಿಗಳು ಸಹ ಜಂಟಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1ರಲ್ಲಿ ವಾದಿಗಳಿಗೂ 1/3ನೇ ಭಾಗಾಂಶದ ಹಕ್ಕಿದೆ ಎಂದರೆ ಸಾಕ್ಷಿಯು ನಮ್ಮ ತಂದೆ ಇದ್ದಾಗಲೇ ಐದು ಲಕ್ಷ ಪಡೆದುಕೊಂಡು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳಿಗೆ ಐದು ಲಕ್ಷ ಪಾವತಿಸಿರುವ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಒಪ್ಪಿಗೆ ಪತ್ರ ಮಾತ್ರ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಯಾವುದೇ ಒಪ್ಪಿಗೆ ಪತ್ರ ಆಗಿಲ್ಲ, ವಾದಿಗಳಿಗೆ ಯಾವುದೇ ಹಣ ಕೊಟ್ಟಿಲ್ಲ ಹಾಗೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ವಿಭಾಗ ಪತ್ರ, ಒಪ್ಪಿಗೆ ಪತ್ರ ಆಗಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ತಾಯಿ ಬೊಮ್ಮಕ್ಕ 2020ರಲ್ಲಿ ಮೋಸದಿಂದ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಿಪಿ-5ರಂತೆ ದಿನಾಂಕ

30.06.2020ರಲ್ಲಿ ನನ್ನ ತಾಯಿಯ ಹೆಸರಿಗೆ ಪೌತಿ ಖಾತೆ ಆಗಿದೆ ಎಂದರೆ ಸತ್ಯ. ಮೋಸದಿಂದ ಖಾತೆ ಮಾಡಿಸಿಕೊಂಡು ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರಯತ್ನಪಟ್ಟೆವು ಎಂದರೆ ಸರಿಯಲ್ಲ. ವಾದಿಗಳು ಏಕೆ ಮೋಸ ಮಾಡಿದ್ದೀರಿ ಭಾಗ ಕೊಡಿ ಎಂದು ನಮ್ಮನ್ನು ಕೇಳಿದರು ಎಂದರೆ ಸರಿಯಲ್ಲ. ವಾದಿಗಳಿಗೆ ಭಾಗ ತಪ್ಪಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳಿಗೂ ದಾವಾ ಸ್ವತ್ತುಗಳಲ್ಲಿ ಭಾಗ ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.